# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 86 |
| ಸದಸ್ಯರ ಹೆಸರು | ಶ್ರೀ ಅರವಿಂದ ಕುಮಾರ ಅರಳಿ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 13.02.2024 |
| ಉತ್ತರಿಸುವ ಸಚಿವರು | ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರಗಳು |
|---|---|---|
| ಅ) | ಬೀದರ್ ಜಿಲ್ಲೆಯಲ್ಲಿ ಬೆಟ್ಟ ಗುಡ್ಡಗಳನ್ನು ಅಗೆದು ಮಣ್ಣು ಗಣಿಗಾರಿಕೆ ಹಾಗೂ ಪರಿಸರ ನಾಶ (ಹಾಳು) ಮಾಡುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; | ಬೀದರ್ ಜಿಲ್ಲಾ ವ್ಯಾಪ್ತಿಯಲ್ಲಿ ಖನಿಜ ತೆಗೆಯಲು ನಿಯಮಾನುಸಾರ ಕಾರ್ಯಾನುಮತಿ / ಲೈಸೆನ್ಸ್ ಗಳನ್ನು ಪಡೆದು ಗಣಿಗಾರಿಕೆ ನಡೆಸಲಾಗುತ್ತಿದೆ. |
| ಆ) | ಬಂದಿದ್ದಲ್ಲಿ, ಬೆಟ್ಟ ಗುಡ್ಡವನ್ನು ಅಗೆಯಲು ಆ ಪರಿಸರ ಇಲಾಖೆಯ ಅನುಮತಿ ಪಡೆಯ ಲಾಗಿದೆಯೇ; ಇಲ್ಲವಾದಲ್ಲಿ, ಅಂತಹವರ ಹಾಗೂ ಇದನ್ನು ಗಮನಿಸಿಯು ಗಮನಿಸದಂತೆ ನಡೆದುಕೊಳ್ಳುತ್ತಿರುವ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಅಧಿಕಾರಿ ವಿರುದ್ಧ ಯಾವ ಕ್ರಮ ಜರುಗಿಸಲಾಗಿದೆ; | ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ರ ನಿಯಮ 3-A(b) ರಂತೆ ಪಟ್ಟಾ ಜಮೀನುಗಳನ್ನು ಕೃಷಿ ಯೋಗ್ಯ ಜಮೀನುಗಳನ್ನಾಗಿ ಮಾರ್ಪಡಿಸಲು ಕೃಷಿ ಇಲಾಖೆಯ ಅಭಿಪ್ರಾಯವನ್ನು ಪಡೆದು ಲ್ಯಾಟರೈಟ್ ಮತ್ತು ಮುರ್ರಂ ತೆಗೆಯಲು 12 ತಿಂಗಳುಗಳವರೆಗೆ ಕಾರ್ಯಾನುಮತಿ ನೀಡಲು ಅವಕಾಶವಿರುತ್ತದೆ.<br><br>ಸದರಿ ನಿಯಮದಡಿ ಕಾರ್ಯಾನುಮತಿ ನೀಡುವ ಪ್ರಕರಣಗಳಿಗೆ ಪರಿಸರ ಅನುಮತಿ ಪತ್ರ ಪಡೆಯುವ ಅವಶ್ಯವಿರುವುದಿಲ್ಲ.<br><br>ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ರ ನಿಯಮ 3-A(b) ರಡಿ ಕಾರ್ಯಾನುಮತಿ ಕೋರಿ 35 ಅರ್ಜಿಗಳು ಸ್ವೀಕೃತಗೊಂಡಿದ್ದು, ಪ್ರಸ್ತುತ, 14 ಅರ್ಜಿಗಳ ಪ್ರಕರಣದಲ್ಲಿ ಉಪಖನಿಜ ತೆಗೆಯಲು 12 ತಿಂಗಳವರೆಗೆ ಕಾರ್ಯಾನುಮತಿ ನೀಡಲಾಗಿರುತ್ತದೆ.<br><br>ಬೀದರ್ ಜಿಲ್ಲಾ ವ್ಯಾಪ್ತಿಯಲ್ಲಿ ಪಟ್ಟಾ ಜಮೀನುಗಳಲ್ಲಿ 43 ಕಲ್ಲುಗಣಿ ಗುತ್ತಿಗೆಗಳನ್ನು ಪರಿಸರ ಅನುಮತಿ ಪತ್ರ ಪಡೆದು ಮಂಜೂರು ಮಾಡಲಾಗಿರುತ್ತದೆ.<br><br>ಪ್ರಸಕ್ತ ಸಾಲಿನಲ್ಲಿ ಬೀದರ್ ಜಿಲ್ಲಾ ವ್ಯಾಪ್ತಿಯಲ್ಲಿ ಉಪಖನಿಜ ಗಣಿಗಾರಿಕೆಗೆ ಗುತ್ತಿಗೆ / ಪರವಾನಗಿ ಪಡೆಯದೆ ಗಣಿಗಾರಿಕೆ ನಡೆಸುತ್ತಿದ್ದ 43 ಪ್ರಕರಣಗಳನ್ನು ಪತ್ತೆ ಹಚ್ಚಿದ್ದು, |

. . . 2

| | | |
|---|---|---|
| | | -ಈ ಪೈಕಿ 01 ಪ್ರಕರಣದಲ್ಲಿ ಮೊಕದ್ದಮೆ ದಾಖಲಿಸಿದ್ದು, 42 ಪ್ರಕರಣಗಳಿಗೆ ಸಂಬಂಧಿಸಿದಂತೆ ₹6,95,000/- ಗಳ ದಂಡ ವಿಧಿಸಿ ಸಂಗ್ರಹಿಸಲಾಗಿರುತ್ತದೆ. |
| ಇ) | ಬೆಟ್ಟಗುಡ್ಡಗಳನ್ನು ರಕ್ಷಿಸಿ ಜಿಲ್ಲೆಯ ಪರಿಸರ ವಾತಾವರಣ ಕಾಪಾಡುವ ದೃಷ್ಟಿಯಿಂದ ಮತ್ತು ಸರಿಯಾದ ಸಮಯಕ್ಕೆ ಮಳೆಗಾಳಿ ದೊರಕುವಂತಾಗಲು ಸರ್ಕಾರ ಕ್ರಮ ಕೈಗೊಳ್ಳಲಾಗುವುದೇ; | ಬೀದರ್ ಜಿಲ್ಲೆಯಲ್ಲಿ ಸರ್ಕಾರಿ ಕಾಮಗಾರಿಗಳಿಗೆ ಹಾಗೂ ಸಾರ್ವಜನಿಕ ಅಭಿವೃದ್ಧಿ ಕಾಮಗಾರಿಗಳಿಗೆ ಅವಶ್ಯವಿರುವ ಕಟ್ಟಡ ಕಲ್ಲು, ಜೆಲ್ಲಿ ಹಾಗೂ ಇತರೆ ಉಪ ಖನಿಜಗಳನ್ನು ಬೇಡಿಕೆಗೆ ಅನುಗುಣವಾಗಿ ಸರಬರಾಜು ಮಾಡಲು ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಗಳು, 1994ರ ನಿಯಮಗಳಂತೆ ಶಾಸನಬದ್ಧ ತೀರುವಳಿಗಳಾದ ಅನುಮೋದಿತ ಕ್ವಾರಿಯಿಂಗ್ ಪ್ಲಾನ್ ಮತ್ತು ಪರಿಸರ ಅನುಮತಿ ಪತ್ರ ಪಡೆದು ಗುತ್ತಿಗೆ/ಪರವಾನಗಿಗಳನ್ನು ಮಂಜೂರು ಮಾಡಲಾಗಿರುತ್ತದೆ.<br><br>ಪರಿಸರ ವಾತಾವರಣ ಕಾಪಾಡುವ ದೃಷ್ಟಿಯಿಂದ ಗುತ್ತಿಗೆ/ಕ್ರಷರ್ ಪ್ರದೇಶದ ವ್ಯಾಪ್ತಿಯಲ್ಲಿ ಸ್ವಚ್ಛತಾ ಪಕವಾಡ ಕಾರ್ಯಕ್ರಮ ಹಾಗೂ ಇತರೇ ಕಾರ್ಯಕ್ರಮದ ಅಡಿಯಲ್ಲಿ ಪರಿಸರ ಸಂರಕ್ಷಣೆ ಬಗ್ಗೆ ಜಾಗೃತಿ ಮೂಡಿಸಿ ಬೇವು, ಹುಣಸೆ, ಹೊಂಗೆ, ಗುಲ್‌ಮೊಹರ್, ಮುತ್ತುಗದ ಮರ, ಮುಂತಾದ ಇತರ ಸ್ಥಳೀಯ ತಳಿಯ ದಟ್ಟವಾದ ಎಲೆಗಳುಳ್ಳ ಮರಗಳನ್ನು ಒಳಗೊಂಡ ಸಮರ್ಪಕ ಹಸಿರು ವಲಯವನ್ನು ಕ್ರಷರ್ ಘಟಕಗಳ/ಕಲ್ಲು ಗಣಿಗುತ್ತಿಗೆಗಳು ಸುತ್ತಮುತ್ತಲೂ ಗಿಡಮರಗಳನ್ನು ಬೆಳೆಸಲು ಕ್ರಮ ಕೈಗೊಳ್ಳಲಾಗಿರುತ್ತದೆ. |
| ಈ) | 2019 ರಿಂದ 2023-24 ರವರೆಗೆ ಬೀದರ್ ಜಿಲ್ಲೆಯಲ್ಲಿ ಎಷ್ಟು ಬೆಟ್ಟಗುಡ್ಡಗಳನ್ನು ಅಗೆದು ನೆಲಸಮ ಮಾಡಲಾಗಿದೆ; (ತಾಲ್ಲೂಕುವಾರು ವಿವರ ನೀಡುವುದು) | ಬೀದರ್ ಜಿಲ್ಲೆಯಲ್ಲಿ ಬಹುತೇಕ ಸಮತಟ್ಟಾದ ಪ್ರದೇಶವಿದ್ದು ,ಭೂಮಟ್ಟಕ್ಕಿಂತ ಮೇಲ್ಪಾಗದ (Moderating undulating topography) ಪ್ರದೇಶಗಳಲ್ಲಿ 2019 ರಿಂದ 2023-24 ರವರೆಗೆ ಒಟ್ಟು 30 ಉಪ ಖನಿಜ ಗಣಿಗುತ್ತಿಗೆಗಳನ್ನು ಮಂಜೂರು ಮಾಡಲಾಗಿದ್ದು, ಈ ಪೈಕಿ 11 ಗುತ್ತಿಗೆಗಳು ಭೂಮಟ್ಟಕ್ಕಿಂತ ಮೇಲ್ಪಾಗದ ಪ್ರದೇಶದಲ್ಲಿರುತ್ತವೆ. ಸದರಿ ಪ್ರದೇಶಗಳಲ್ಲಿ ಗುತ್ತಿಗೆ ಮಂಜೂರಾದ ಸಾಲಿನಿಂದ ಗಣಿಗಾರಿಕೆ ನಿರ್ವಹಿಸಿದ್ದು, ಪ್ರಸ್ತುತ ಸದರಿ ಗುತ್ತಿಗೆಗಳ ಅಳತೆಗಳು ಭೂಮಟ್ಟಕ್ಕೆ ಸಮವಾಗಿರುವುದು ಕಂಡು ಬಂದಿರುತ್ತದೆ.<br><br>**ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.** |

ಸಂಖ್ಯೆ: ಸಿಐ-ಎಂಎಂಎನ್/42/2024

**(ಎಸ್.ಎಸ್.ಮಲ್ಲಿಕಾರ್ಜುನ)**
ಗಣಿ ಮತ್ತು ಭೂ ವಿಜ್ಞಾನ ಹಾಗೂ
ತೋಟಗಾರಿಕೆ ಸಚಿವರು.

## 2019 ರಿಂದ ಮಂಜೂರಾಗಿ ಗುತ್ತಿಗೆಗಳು ಭೂಮಟ್ಟಕ್ಕಿಂತ ಮೇಲ್ಭಾಗದ ಪ್ರದೇಶದಲ್ಲಿರುವ ಕಲ್ಲುಗಣ ಗುತ್ತಿಗೆಗಳ ವಿವರ

| ಕ್ರ ಸಂ. | ಕಲ್ಲುಗಣಿ ಮಾಲೀಕರ ಹೆಸರು | ತಾಲ್ಲೂಕು | ಗ್ರಾಮ | ಖನಿಜ | ಸರ್ವೆ ನಂ. | ಸರ್ಕಾರಿ/ ಪಟ್ಟಾ | ವಿಸ್ತೀರ್ಣ ಎಕರೆಗಳಲ್ಲಿ | ಲೈಸನ್ಸ್ ನೀಡಿದ ದಿನಾಂಕ | ಅವಧಿ |
|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 |
| 1 | ಶ್ರೀ ಸಂತೋಷಪಾಟೀಲ್ ತಂದೆ ನಾಗಭೂಷಣ ಪಾಟೀಲ್ | ಹುಮನಾಬಾದ | ಕಲ್ಲೂರ | ಕಟ್ಟಡ ಕಲ್ಲು (ಟ್ರಾಪ್) | 216/5 | ಪಟ್ಟಾ | 1–11 | 29/07/19 | 10 |
| 2 | ಶ್ರೀ ಶ್ರೀನಿವಾಸರಾವ ತಂದೆ ಮಾಧವರಾವ ಕಾಳೆ | ಹುಮನಾಬಾದ | ಕಲ್ಲೂರ | ಕಟ್ಟಡ ಕಲ್ಲು (ಟ್ರಾಪ್) | 220/3 | ಪಟ್ಟಾ | 1–00 | 29/07/19 | 10 |
| 3 | ಶ್ರೀ ಶರಣಪ್ಪಾ ಪಾಟೀಲ ತಂದೆ ನಾಗಭೂಷಣ ಪಾಟೀಲ್ | ಹುಮನಾಬಾದ | ಮುಸ್ತಾಪೂರ | ಕಟ್ಟಡ ಕಲ್ಲು (ಟ್ರಾಪ್) | 102/4 | ಪಟ್ಟಾ | 2–00 | 29/07/19 | 20 |
| 4 | ಶ್ರೀ ಮನೋಜ ಗಾವಳಕರ ತಂದೆ ಲಕ್ಷ್ಮಣರಾವ | ಹುಮನಾಬಾದ | ಮುಸ್ತಾಪೂರ | ಕಟ್ಟಡ ಕಲ್ಲು (ಟ್ರಾಪ್) | 65/3 | ಪಟ್ಟಾ | 1–00 | 05/08/19 | 10 |
| 5 | ಶ್ರೀಮತಿ ಜ್ಯೋತಿ ಗಂಡ ನಂದಕುಮಾರ ನಾಗಮಾರಪಳ್ಳಿ | ಔರಾದ | ಚಿಂತಾಕಿ | ಕಟ್ಟಡ ಕಲ್ಲು (ಟ್ರಾಪ್) | 250/3 | ಪಟ್ಟಾ | 2–00 | 27/08/20 | 20 |
| 6 | ಶ್ರೀ ಎಸ್. ಪವೀತಸಿಂಗ್ ತಂದೆ ಎಸ್.ಬಲಬೀರಸಿಂಗ್ | ಬೀದರ | ಜನವಾಡ | ಕಟ್ಟಡ ಕಲ್ಲು (ಟ್ರಾಪ್) | 89/3 | ಪಟ್ಟಾ | 2–00 | 21/10/20 | 10 |
| 7 | ಶ್ರೀ ಸ್ವಾಮಿ ಸಮರ್ಥ ಇಂಜಿನಿಯರ್ಸ್ ಲಿಮಿಟೆಡ್, | ಭಾಲ್ಕಿ | ನಿರಮನಹಳ್ಳಿ | ಕಟ್ಟಡ ಕಲ್ಲು (ಟ್ರಾಪ್) | 62/*/2 | ಪಟ್ಟಾ | 2–20 | 30/11/21 | 10 |
| 8 | ಆರ್.ಎಂ.ಎನ್ ಇನ್ಫ್ರಾಸ್ಟ್ರಕ್ಚರ್ ಲೀ | ಔರಾದ | ಲಾಧಾ | ಕಟ್ಟಡ ಕಲ್ಲು (ಟ್ರಾಪ್) | 62/4 & 62/5 | ಪಟ್ಟಾ | 9–00 | 10/01/22 | 10 |
| 9 | ಶ್ರೀ ಸುರೇಖಾಬಾಯಿ ಗಂಡ ರಮೇಶ ಗಾವಳಕರ್ | ಹುಮನಾಬಾದ | ಕಲ್ಲೂರು | ಕಟ್ಟಡ ಕಲ್ಲು (ಟ್ರಾಪ್) | 220/2 | ಪಟ್ಟಾ | 1–00 | 09/11/22 | 10 |
| 10 | ಶ್ರೀ ಪ್ರಶಾಂತ ರೇಜಿಂತಲ್ | ಬೀದರ | ಸುಲ್ತಾನಪೂರ | ಕಟ್ಟಡ ಕಲ್ಲು (ಟ್ರಾಪ್) | 25/7 | ಪಟ್ಟಾ | 4–30 | 06/02/23 | 20 |
| 11 | ಶ್ರೀ ಸ್ವಾಮಿ ಸಮರ್ಥ ಇಂಜಿನಿಯರ್ಸ್ ಲಿಮಿಟೆಡ್, | ಭಾಲ್ಕಿ | ನಿರಮನಹಳ್ಳಿ | ಕಟ್ಟಡ ಕಲ್ಲು (ಟ್ರಾಪ್) | 61/2 | ಪಟ್ಟಾ | 2–27 | 22/08/23 | 10 |

CI-42-MMN-2024

Deputy Director (Min. Admn)
Dept. of Mines & Geology
Bangalore-560001